

ಹೊರಡುವ ದಿಬ್ಬಣಕೆ ಗಡಣ ತಯಾರಿ
ನಡೆವುದಯ್ಯಾ ಕಡೆಯ ಜಂಬುಸವಾರಿ
ಉರಗಗಳ ಹೊತ್ತು ಉರಿಬಿಸಿಲಲಿ ನಡೆದುದಕೆ ಸಾಕ್ಷಿ ಬೊಂಬಿನ ತುದಿ
ಉತ್ತರೋತ್ತರದ ಕಡೆಯ ಹಾದಿ ಕಾಣಿಸುತಿದೆ ವಿಮಾನದ ಪತಾಕೆ

ಪ್ರಶ್ನೆ ಮೂಡುತ್ತಲಿದೆ ಮಾರ್ಗ ಮಧ್ಯೆ
ಇಲ್ಲದ ಚೆನ್ನನನು ಕೂಗಿ ಕರೆದೆ ಹುಡುಕಿದೆ ಸಿಗಲಿಲ್ಲ ಗುಹ
ಈ ಕುಂಭದ್ರೋಣ ಮಳೆಗೆ ತುಂಬಿ ಊಳಿಡುವ ನದಿಗೆ ಮೈ ತುಂಬ ಗಾಯ
ಕಲಕತ್ತೆಯಲಿ ನಿಂತ ತಾಯಿ
ಕೆನ್ನಾಲಿಗೆಯ ಕಂಕಾಲ ಕಾಳಿ ನೆನಪಾದಳು ಕಾಲದ ಹಾಗೆ

ರುಂಡಮಾಲೆಯ ಹೊತ್ತು ಕುಣಿವ ಮುಖಕಮಲದಲೂ ಮಂದಹಾಸ
ಸುಡುವ ಮಧ್ಯಾಹ್ನದ ಬಾವಿ ನೀರು
ಆವಿಯಾಗದೆ ನಿಂತು ಕೊಳೆತ ಪಾಚಿ
ತೇಲಾಡುವ ಆಮೆ ಮುಖವೆತ್ತಿ ಮೈ ಪುಳಕಿಸುವ ಮೀನು
ಸುಟ್ಟ ಸಿಗರೇಟುಗಳ ಕಿತ್ತು ಎಸೆದೆ
ಕುಣಿವ ಕಾಲನ ಕಾಲಡಿಯಲೂ
ಉಲಿವ ಮಂದಹಾಸ

'ಮುಖ ತೊಳೆದು ಬರುವೆ ತಡಿಯಿರಿ' ಎಂದೆ
'ಸ್ನಾನವನೆ ಮಾಡಿಸುವೆವು, ಸುಮ್ಮನೆ ಹೊರಡು ಗೆಳೆಯ' ಎಂದರು
ಪೊರೆಯದಿದ್ದರೂ ಪೊರೆ ಕಳಚಿ ಕಾಣುವ ಮುಖ
ಕಾಲ್ ಮಡಚಿ ಹಣೆಗೆ ಕಾಳಿಯ ಕಂಕಾಳದ ಕುಂಕುಮದ ಮುದ್ರೆ ಒತ್ತಿದರು
ಮೈ ಕೈ ಗೆ ಮೆತ್ತಿದ ಅರಿಶಿನದ ಬಣ್ಣ
ಕಾಲು ಕೈ ಸೊಂಟ ಕುತ್ತಿಗೆಗೆ ಹಗ್ಗದ ಸರಪಳಿ

